ಶ್ರೀ ಎಸ್. ಬಂಗಾರಪ್ಪ .—ಬೈ ಪಾಸ್ ರಸ್ತೆಯ ವಿಷಯದಲ್ಲಿ ಒಂದು ಪಾಲಿಸಿ ಮ್ಯಾಟರ್ ಎಂಬುದಾಗಿ ಪರಿಗಣಿಸುವುದಕ್ಕೆ ವಿಚಾರ ಮಾಡುತ್ತಿದ್ದೇವೆ. ಈ ವಿಚಾರದಲ್ಲಿ ತಿಪಟೂರು ಆಗಿರಬಹುದು, ಮತ್ತೊಂದು ಇರಬಹುದು, ರಾಜ್ಯದಲ್ಲಿ ಈ ರೀತಿಯಾಗಿ ಪ್ರಯಾಣಕ್ಕೆ ತೊಂದರೆ ಇದೆ. ವಾಹನಗಳ ಸಂಖ್ಯೆ ಕೂಡ ಜಾಸ್ತಿಯಾಗಿದೆ. ಆದರೆ ರಸ್ತೆ ಮಾತ್ರ ಮೊದಲು ಇದ್ದಂತಹ ರೀತಿಯಲ್ಲೇ ಇವೆ, ಅವುಗಳನ್ನು ದೊಡ್ಡದನ್ನಾಗಿ ಮಾಡುವುದಕ್ಕಾಗಿಲ್ಲ. ಇದಕ್ಕೆ ಕೆಲವು ಕಟ್ಟಡಗಳು ಮಧ್ಯ ಬಂದು ಅದರ ತಕರಾರು ಬರುತ್ತದೆ, ಕೆಲವು ವಿಚಾರದಲ್ಲಿ ಹಣಕಾಸಿನ ಸಕಾರಣಗಳೂ ಬರುತ್ತವೆ. ಇದರ ಬಗ್ಗೆ ನಾವು ಅಧಿಕಾರಿಗಳ ಜೊತೆಯಲ್ಲಿ ಚರ್ಚೆಯನ್ನಿಟ್ಟು ಕೊಂಡಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿ, ಪಟ್ಟಣಗಳಲ್ಲಿ ಅಂದರೆ ದೊಡ್ಡ ದೊಡ್ಡ ನಗರಗಳಲ್ಲಿ, ಮಂಗಳೂರು, ಬೆಳಗಾಂ, ಹುಬ್ಬಳ್ಳಿ ಧಾರವಾಡ ಈ ಊರುಗಳಲ್ಲಿ ಬೈ ಪಾಸ್ ರಸ್ತೆಯನ್ನು ಮಾಡಬೇಕು ಈಗ ಈ ಪಟ್ಟಣಗಳು ವಿಸ್ತರಗೊಳ್ಳುವುದಕ್ಕೆ ಮೊದಲೆ ರಸ್ತೆಯ ಜಾಗವನ್ನು ಅಕ್ವೈರ್ ಮಾಡಬೇಕೆಂದು ವಿಚಾರ ಮಾಡುತ್ತಿದ್ದೇವೆ. ಇದರ ಸಂಪೂರ್ಣ ವಿವರ ನಮ್ಮ ಇಲಾಖೆಯ ಡಿಮ್ಯಾಂಡ್ ಬರುವ ಸಮಯಕ್ಕೆ ರೆಡಿಯಾಗಬಹುದು. ಇದರ ಮಧ್ಯ ಮಾನ್ಯ ಸದಸ್ಯರು ಏನೊಂದು ಅಭಿಪ್ರಾಯವನ್ನು ವ್ಯಕ್ತಪಡಿಸಿ ಇದರ ಪೂರ್ಣ ಖರ್ಚನ್ನು ಸರ್ಕಾರದವರೇ ವಹಿಸಿಕೊಂಡು ಈ ಬೈ ಪಾಸ್ ರಸ್ತೆಯನ್ನು ಮಾಡಬೇಕು, ಪುರಸಭೆಯವರು ತಮ್ಮ ವಂತಿಕೆಯನ್ನು ಕೊಡುವುದಕ್ಕಾಗುವದಿಲ್ಲ. ಈ ವಿಷಯ ಕೂಡ ಪರಿಶೀಲನೆ ಮಾಡ ವುದಕ್ಕೆ ಯೋಗ್ಯವಾದುದು, ಇದನ್ನು ಪರಿಶೀಲನೆ ಮಾಡುತ್ತೇನೆ.

Non-use of Television in Villages

786 SRI M. Y. PATIL (Afzalpur) :— Will the Minister for Rural Development and P. Raj be pleased to state :—

(*a*) the reasons why Television is not being used in most of the villages, where it has been installed in Gulbarga District ;

(*b*) which Department bears the maintenance charges of such Television ;

(*c*) which Department bears the electricity charges ?

SRI K. PRABHAKAR :—Minister for Rural Development and P. Rai

(*a*) Generally the T. V. Set are being used in almost all the Villages where they have been installed. Some times it is not being operated due to failure in power supply and in a few cases of single teacher schools when that teacher is absent himself from headquarters on leave or on other duty.

(*b*) For the present the T V. Sets are being maintained by a Doordarshan Kendra, Gulbarga (Central Government).

(c) State Government bears the Electricity consuption charges. Funds are placed at the disposal of Deputy Director of Public instruction, Gulbarga.

ಶ್ರೀ ಎಂ. ವೈ. ಪಾಟೀಲ್ :— ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ದೂರದರ್ಶನ ಸೆಟ್ಟುಗಳನ್ನು ಅಳವಡಿಸಲಾಗಿರುವ ಬಹುತೇಕ ಎಲ್ಲ ಗ್ರಾಮಗಳಲ್ಲಿ ಅವುಗಳನ್ನು ಸಾಮಾನ್ಯವಾಗಿ ಉಪಯೋಗಿಸಲಾಗುತ್ತಿದೆ ಎಂಬುದಾಗಿ ಹೇಳಿದ್ದಾರೆ, ಆದರೆ ನನ್ನ ಗಮನಕ್ಕೆ ಬಂದ ಪ್ರಕಾರ ೧೯೮೬ಕ್ಕೆ ೯೦ ಹಳ್ಳಿಗಳಲ್ಲಿ ಈ ದೂರದರ್ಶನ ಸೆಟ್ಟುಗಳನ್ನು ಅಳವಡಿಸಿಲ್ಲ. ಕೆಲವು ಗ್ರಾಮಗಳಲ್ಲಿ ಅಳವಡಿಸಿರುವ ದೂರದರ್ಶನ ಸೆಟ್ಟುಗಳು ಕೆಟ್ಟುಹೋಗಿ ಅವುಗಳನ್ನು ರಿಪೇರಿ ಮಾಡಿಲ್ಲ. ರಿಪೇರಿ ಮಾಡುವ ಕೆಲಸ ರಾಜ್ಯ ಸರ್ಕಾರದ್ದು ಕೇಂದ್ರ ಸರ್ಕಾರದ್ದಲ್ಲ ಎಂಬುದಾಗಿ ಅಧಿಕಾರಿಗಳು ಹೇಳುತ್ತಾರೆ. ಮತ್ತೆ ಎಲೆಕ್ಟ್ರಿಸಿಟಿ ಚಾರ್ಜಸ್ಸನ್ನು

ವಿದ್ಯಾ ಇಲಾಖೆಯವರು ಕೊಡಬೇಕೆಂದು ಹೇಳಿದ್ದಾರೆ. ಅವರಿಗೆ ಇದಕ್ಕಾಗಿ ಪ್ರತ್ಯೇಕ ಹಣವನ್ನು ಒದಗಿಸಿಲ್ಲ. ಆದ್ದರಿಂದ ದೂರದರ್ಶನ ಸೆಟ್ಟುಗಳು ಎಲ್ಲೆಲ್ಲಿ ಸರಿಯಾಗಿ ನಡೆಯುತ್ತಿಲ್ಲ ಅವುಗಳು ಸಾಧ್ಯವಾದಷ್ಟು ಶೀಘ್ರವಾಗಿ ನಡೆಯುವ ರೀತಿಯಲ್ಲಿ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

† ಶ್ರೀ ಕೆ. ಪ್ರಭಾಕರ್ :— ಈಗ ಇರತಕ್ಕಂಥವು ಸುವ್ಯವಸ್ಥಿತವಾಗಿ ಇವೆ. ಆದರೆ ಅವು ಆಗಿಂದಾಗ್ಗೆ ವಿದ್ಯುಚ್ಛಕ್ತಿ ತೊಂದರೆಯಿಂದ ಕೆಟ್ಟು ಹೋಗುತ್ತವೆ. ಆದರೆ ತಾವು ಹೇಳುವಂತೆ ದೊಡ್ಡ ಸಂಖ್ಯೆಯಲ್ಲಿ ಕೆಟ್ಟಿಲ್ಲ ಎಂಬುದಾಗಿ ವರದಿಯಾಗಿದೆ. ಒಂದು ವೇಳೆ ಎಲ್ಲೆಲ್ಲಿ ಕೆಟ್ಟು ಹೋಗಿವೆ ಅವುಗಳನ್ನು ಕೂಡಲೆ ಸರಿಪಡಿಸುವುದಕ್ಕೆ ಆದೇಶವನ್ನು ಕೊಡುತ್ತೇನೆ.

ಶ್ರೀ ಎಂ. ಪೈ ಪಾಟೀಲ್ :— ದೂರದರ್ಶನ ಸೆಟ್ಟುಗಳ ಮೈನ್‌ಟೆನ್ಸ್‌ನ್ನು ಯಾರೂ ಮಾಡಿಲ್ಲ. ಅದನ್ನು ದೂರದರ್ಶನ ಇಲಾಖೆಯವರು ಮಾಡುತ್ತಾರೋ ? ಅಥವಾ ರಾಜ್ಯ ಸರ್ಕಾರದವರು ಮಾಡುತ್ತಾರೋ ?

ಶ್ರೀ ಕೆ ಪ್ರಭಾಕರ್ :— ಅವುಗಳು ರಿಪೇರಿಗಾಗಿ ಸರ್ಕಾರ ಹಣವನ್ನು ಕೊಡುತ್ತದೆ. ಅದು ಡೆಪ್ಯುಟಿ ಡೈರೆಕ್ಟರನ ವಶದಲ್ಲಿರುತ್ತದೆ. ಇನ್‌ಸ್ಟಾಲ್‌ಗೆ ಸಂಬಂಧಪಟ್ಟ ಚಾರ್ಜಸ್ಸನ್ನು ಕೇಂದ್ರ ಸರ್ಕಾರ ಕೊಡುತ್ತದೆ. ಅದರ ಮೈಂಟೆನ್ಸ್‌ನ್ನು ರಾಜ್ಯ ಸರ್ಕಾರ ನೋಡಿಕೊಳ್ಳುತ್ತದೆ.

Promotions in the Karnataka Electricity Board

538 SMT. RENUKA RAJENDRAN (Chickaballapur)— Will the Minister of State for information and Youth Services be pleased to state :-

(*a*) whether it has come to the notice of Government that the Karnataka Electricty Board has promoted persons from Class III and Class II without having regard to the Government Order realting to reservations of posts in promotional vacancies for SC/ST officials ?

(*b*) whether it is a fact that while giving promotions the Karnataka Electricity Board has not given promotions to SC/STs. in required percentage ;

(c) whether a few people promoted and belonging to the SC/ST community have not been given due positions as per the Government Order for providing place in the seniority list as 2, 9, 16, 17, 24, and 31 so on ?

(*d*) the action Government intends to take to rectify these mistakes?

SRI K. H. SRINIVAS : — Minister of State for Information and Youth Services.

(*a*) No

(*b*) No

(c) The seniority of SC and ST employes promoted to the next higher cadre are maintained in accordance with the Government's official Memorandum No. DPAR 29 SBC 77 dated 1-6-1978.

(*d*) Does not arise in view of replies given above.